# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** | : | **ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)** |
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | **1054** |
| **ಉತ್ತರಿಸಬೇಕಾದ ದಿನಾಂಕ** | : | **12.03.2026** |
| **ಉತ್ತರಿಸಬೇಕಾದ ಸಚಿವರು** | : | **ಸನ್ಮಾನ್ಯ ಮುಖ್ಯಮಂತ್ರಿ** |

| **ಕ್ರ. ಸಂ** | **ಪ್ರಶ್ನೆ** | **ಉತ್ತರ** |
|---|---|---|
| ಅ) | ಕೆಲವೆಡೆ ಡೈರಿಗಳಿಗೆ ಪೂರೈಕೆ ಆಗುವ ಹಾಲಿನಲ್ಲಿ ಯೂರಿಯಾ, ಸಕ್ಕರೆ, ಪೌಡರ್ ಸೇರಿದಂತೆ ಇನ್ನಿತರೆ ರಾಸಾಯನಿಕಗಳನ್ನು ಸೇರಿಸುತ್ತಿರುವುದರಿಂದ ಹಾಲಿನಲ್ಲಿ ಕಲಬೆರಕೆ ಅಂಶ ಕಂಡುಬರುತ್ತಿರುವುದು ನಿಜವೇ; | ಕರ್ನಾಟಕ ಹಾಲು ಮಹಾಮಂಡಳದ ಜಿಲ್ಲಾ ಹಾಲು ಒಕ್ಕೂಟಗಳ ವ್ಯಾಪ್ತಿಯ ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಉತ್ಪಾದಕರು ಸರಬರಾಜು ಮಾಡುವ ಹಾಲಿನಲ್ಲಿ ಉಪ್ಪು ಹಾಗೂ ಸಕ್ಕರೆ ಕಲಬೆರಕೆ ಅಂಶ ಪತ್ತೆಯಾಗಿರುತ್ತದೆ.<br><br>ಹಾಲಿನಲ್ಲಿ ಕಲಬೆರಕೆ ಅಂಶ ಪತ್ತೆ ಹಚ್ಚಲು ಎಲ್ಲಾ ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ Adulteration test Kit (Soda, Salt, Neutralizer, Urea, Starch, Sugar ಇತರೆ) ಅನ್ನು ಒದಗಿಸಲಾಗಿದ್ದು, ಕಲಬೆರಕೆ ಅಂಶವನ್ನು ಪರೀಕ್ಷಿಸಲಾಗುತ್ತಿದೆ ಹಾಗೂ ಸಂಘಗಳಲ್ಲಿ ಸ್ವೀಕರಿಸಿದ ಹಾಲನ್ನು ಡೈರಿ ಹಂತದಲ್ಲಿಯೂ ಸಹ ಎಲ್ಲಾ ರೀತಿಯ ಪರೀಕ್ಷೆಗೊಳಪಡಿಸಿ ಸ್ವೀಕರಿಸಲಾಗುತ್ತಿದೆ. |
| ಆ) | ಇದ್ದಲ್ಲಿ, ಯಾವ ಯಾವ ಜಿಲ್ಲೆಗಳ ಡೈರಿಗಳಿಗೆ ಪೂರೈಕೆ ಆಗುವ ಹಾಲಿನಲ್ಲಿ ಕಲಬೆರಕೆ ಅಂಶ ಕಂಡು ಬಂದಿರುವುದನ್ನು ಪತ್ತೆ ಹಚ್ಚಲಾಗಿದೆ; ಈವರೆವಿಗೂ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಡೈರಿಗಳಿಗೆ ಪೂರೈಕೆ ಆಗುವ ಹಾಲಿನಲ್ಲಿ ಕಲಬೆರಕೆ ಅಂಶ ಕಂಡು ಬಂದಿರುವ ವಿವರಗಳನ್ನು **ಅನುಬಂಧ**ದಲ್ಲಿ ನೀಡಲಾಗಿದೆ.<br><br>ಡೈರಿಗಳಿಗೆ ಪೂರೈಕೆ ಆಗುವ ಹಾಲಿನಲ್ಲಿ ಕಲಬೆರಕೆ ಅಂಶ ಕಂಡುಬಂದಿರುವ ಬಗ್ಗೆ ಇದುವರೆವಿಗೂ ಯಾವುದೇ ಪ್ರಕರಣಗಳನ್ನು ದಾಖಲಿಸಿರುವುದಿಲ್ಲ.<br><br>ಜಿಲ್ಲಾ ಹಾಲು ಒಕ್ಕೂಟಗಳ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಪೂರೈಸುವ ಉತ್ಪಾದಕರ ಹಾಲಿನಲ್ಲಿ ಕಲಬೆರಕೆ ಅಂಶ ಕಂಡುಬಂದಲ್ಲಿ, ಸದರಿ ಹಾಲನ್ನು ತಿರಸ್ಕರಿಸಿ, ಉತ್ಪಾದಕರುಗಳಿಗೆ ಅರಿವು ಮೂಡಿಸಿ, ಸಂಘದ ಕಾರ್ಯಕಾರಿ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರಿಗೆ ಕಲಬೆರಕೆ ಪ್ರಕರಣಗಳು |

<table>
<tr><td></td><td></td><td>ಪುನರಾವರ್ತನೆಯಾಗದಂತೆ ಮತ್ತು ಸಂಬಂಧಿಸಿದವರಿಗೆ ಸೂಕ್ತ ಎಚ್ಚರಿಕೆ ನೀಡಲಾಗಿರುತ್ತದೆ ಹಾಗೂ ಒಕ್ಕೂಟದ ಅಧಿಕಾರಿಗಳಿಂದ ಆಗಿಂದ್ದಾಗ್ಗೆ, ಸಂಘಕ್ಕೆ ಭೇಟಿ ನೀಡಿ ಹಾಲನ್ನು ಪರೀಕ್ಷಿಸಲಾಗುವುದು.</td></tr>
<tr><td>ಇ)</td><td>ಅಲ್ಲದೇ, ಕೆಎಂಎಫ್‌ಗೆ ಪೂರೈಕೆ ಆಗುತ್ತಿರುವ ಹಾಲಿನಲ್ಲಿ ಹಾಗೂ ಖಾಸಗಿ ಕಂಪನಿಗಳ ಹಾಲಿನಲ್ಲಿ ಶೇಕಡ ಎಷ್ಟು ಪ್ರಮಾಣದಲ್ಲಿ ಕಲಬೆರಕೆ ಅಂಶ ಸೇರುತ್ತಿರುವುದು ಪತ್ತೆ ಆಗಿದೆ; (ವಿವರ ನೀಡುವುದು)</td><td>ಕೆಎಂಎಫ್ ನ ಹಾಲು ಒಕ್ಕೂಟಗಳಿಗೆ ಪೂರೈಕೆ ಆಗುತ್ತಿರುವ ಹಾಲಿನಲ್ಲಿ ಕೈಗೊಂಡಿರುವ ಕಲಬೆರಕೆ ಪರೀಕ್ಷಾ ವಿವರ ಈ ಕೆಳಕಂಡಂತಿರುತ್ತದೆ.
<table>
<tr><th>ಅವಧಿ</th><th>ಒಟ್ಟು ಪರೀಕ್ಷಿಸಿದ ಹಾಲಿನ ಮಾದರಿಗಳ ಸಂಖ್ಯೆ</th><th>ಕಲಬೆರಕೆ ಕಂಡು ಬಂದ ಮಾದರಿಗಳ ಸಂಖ್ಯೆ</th><th>ಶೇಕಡ ಕಲಬೆರಕೆ</th></tr>
<tr><td>ಜನವರಿ 2025 ರಿಂದ ಜನವರಿ 2026</td><td>15,15,575</td><td>3,049</td><td>0.20</td></tr>
</table>
ಡೋಡ್ಲಾ ಎಂಬ ಖಾಸಗಿ ಕಂಪನಿಯ ಹಾಲಿನಲ್ಲಿ ಕಲಬೆರಕೆ ಅಂಶವು ಕಂಡುಬಂದಿರುತ್ತದೆ.</td></tr>
<tr><td>ಈ)</td><td>ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯಡಿ ಕಲಬೆರಕೆಗೊಳಿಸುವ ಅಪರಾಧಕ್ಕೆ ಪ್ರಸ್ತುತ ವಿಧಿಸಲಾಗುವ ಶಿಕ್ಷೆ ಏನು; ಶಿಕ್ಷೆ ಪ್ರಮಾಣ ಹೆಚ್ಚಿಸಲು ಸರ್ಕಾರ ಉದ್ದೇಶಿಸಿದೆಯೇ; ಇದ್ದಲ್ಲಿ, ಸಂಪೂರ್ಣ ಮಾಹಿತಿ ನೀಡುವುದು;</td><td>ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ರ ಸೆಕ್ಷನ್ 59 ರನ್ವಯ ಯಾವುದೇ ಆಹಾರ ಮಾದರಿಯು ಅಸುರಕ್ಷಿತ ಎಂದು ಕಂಡು ಬಂದಲ್ಲಿ ಸದರಿ ಪ್ರಕರಣಗಳಿಗೆ ತೀವ್ರತೆಯನ್ನಾಧರಿಸಿ ಕನಿಷ್ಠ 3 ತಿಂಗಳ ಜೈಲು ಶಿಕ್ಷೆಯಿಂದ ಗರಿಷ್ಠ ಜೀವಾವಧಿ ಶಿಕ್ಷೆ ವಿಧಿಸಬಹುದಾಗಿದೆ.</td></tr>
<tr><td>ಉ)</td><td>ಕಲಬೆರಕೆ ಹಾಲನ್ನು ತಡೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?</td><td>ಕೆ.ಎಂ.ಎಫ್ ನಲ್ಲಿ ಕೇಂದ್ರ ಜಾಗೃತ ದಳವು ನಂದಿನಿ ಬ್ರಾಂಡ್ ಅಡಿಯಲ್ಲಿ ಮಾರಾಟವಾಗುತ್ತಿರುವ ಹಾಲಿನಲ್ಲಿ ಕಲಬೆರಕೆ ಅಂಶಗಳನ್ನು ಪತ್ತೆ ಹಚ್ಚಲು ತಂಡ ರಚಿಸಿದ್ದು, ಸದಾ ಕಾರ್ಯಪ್ರವೃತ್ತವಾಗಿರುತ್ತದೆ. ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ನಂದಿನಿ ಬ್ರಾಂಡ್ ಅಡಿಯಲ್ಲಿ ಕಲಬೆರಕೆ ಹಾಲಿನ ಮಾರಾಟ ಕಂಡುಬಂದಲ್ಲಿ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಸ್ಥಳೀಯ ಕೆ.ಎಂ.ಎಫ್ ಘಟಕ/ಒಕ್ಕೂಟಗಳ ಅಧಿಕಾರಿಗಳ ಸಹಯೋಗದೊಂದಿಗೆ ಮೊಕದ್ದಮೆಗಳನ್ನು ಹೂಡಲಾಗುತ್ತಿದೆ.</td></tr>
</table>

**ಸಂಖ್ಯೆ: ಸಿಒ 35 ಸಿಸಿಬಿ 2026**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ

# ಅನುಬಂಧ-1

## ಹಾಲಿನ ಕಲಬೆರಕೆ ಮಾದರಿಗಳ ವಿವರ (ಜನವರಿ-2025 ರಿಂದ ಜನವರಿ 2026)

| ಕ್ರ. ಸಂ. | ಒಕ್ಕೂಟ/ಘಟಕದ ಹೆಸರು | ಒಟ್ಟು ಹಾಲಿನ ಮಾದರಿಗಳು | ಒಟ್ಟು ಕಲಬೆರಕೆ ಹಾಲಿನ ಮಾದರಿಗಳು | ಕಲಬೆರಕೆ (ಶೇ. ವಾರು) |
|---|---|---|---|---|
| 1 | ಕೋಲಾರ | 185223 | 0 | 0 |
| 2 | ಚಿಕ್ಕಬಳ್ಳಾಪುರ | 96512 | 0 | 0 |
| 3 | ಹಾಸನ | 164431 | 788 | 0.48 |
| 4 | ತುಮಕೂರು | 79011 | 107 | 0.14 |
| 5 | ಮೈಸೂರು | 72782 | 1 | 0.001 |
| 6 | ಶಿವಮೊಗ್ಗ | 96999 | 434 | 0.45 |
| 7 | ದ. ಕನ್ನಡ | 51790 | 0 | 0 |
| 8 | ಚಾಮರಾಜನಗರ | 40668 | 11 | 0.03 |
| 9 | ಬಳ್ಳಾರಿ | 79598 | 588 | 0.74 |
| 10 | ಬೆಳಗಾವಿ | 46232 | 267 | 0.58 |
| 11 | ವಿಜಯಪುರ | 18047 | 13 | 0.07 |
| 12 | ಕಲಬುರಗಿ | 39711 | 315 | 0.79 |
| 13 | ಬೆಂಗಳೂರು | 164999 | 2 | 0.001 |
| 14 | ಮಂಡ್ಯ | 133686 | 418 | 0.31 |
| 15 | ಧಾರವಾಡ | 60179 | 105 | 0.17 |
| 16 | ಹಾವೇರಿ | 505 | 0 | 0 |
| 17 | ನಂದಿನಿ ಹೈಟೆಕ್ ಪ್ರಾಡಕ್ಟ್ ಪ್ಲಾಂಟ್ ಚನ್ನರಾಯಪಟ್ಟಣ | 21827 | 0 | 0 |
| 18 | ನಂದಿನಿ ಹೈಟೆಕ್ ಮೆಗಾ ಪೌಡರ್ ಪ್ಲಾಂಟ್, ಕಣ್ವ -ರಾಮನಗರ | 44302 | 0 | 0 |
| 19 | ಮದರ್ ಡೇರಿ | 119073 | 0 | 0 |
| | ಒಟ್ಟು | **1515575** | 3049 | 0.20 |

ಸಹಕಾರ ಸಂಘಗಳ ಸಹಾಯಕ ನಿಬಂಧಕರು
(ಹೈನುಗಾರಿಕೆ ಶಾಖೆ)